
# ಬೆಳಕಿನ ಸಂಚಲನ

ಸಂಪುಟ 7, ಸಂಚಿಕೆ 2 | ದ್ವೈಮಾಸಿಕ ವಾರ್ತಾಪತ್ರ | ಮಾರ್ಚ್–ಏಪ್ರಿಲ್ 2019

**ಗುರೂಜಿ ಕೃಷ್ಣಾನಂದ** (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವ ರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲ ಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ಸ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿ ದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಎದ್ದಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟ್ಯತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ. ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ನೆರವಾಗಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

(ಗುರೂಜಿಯವರ ಭಾಷಣದ ಆಯ್ದ ಭಾಗಗಳು – ಮೇ 14, 2000)

**ಅನು: ಶ್ರೀದೇವಿ**

ಸಾಮಾನ್ಯವಾಗಿ ನಾವು ನಮಗಾಗಿ ಜೀವಿಸುತ್ತೇವೆ. ನಮ್ಮ ಬಗ್ಗೆಯೇ ಯೋಚಿಸುತ್ತೇವೆ, ನಮಗಾಗಿಯೇ ಭಾವನಾತ್ಮಕರಾಗುತ್ತೇವೆ. ಇದು ಸಹಜ. ನಮ್ಮ ಭಾವನೆಗಳನ್ನು ವಿಸ್ತಾರಗೊಳಿಸಿಕೊಳ್ಳುವುದು ಉತ್ತಮ. ನಾವು ಇಡೀ ಪ್ರಪಂಚಕ್ಕಾಗಿ ಸ್ಪಂದಿಸಬಹುದು, ಇಡೀ ಪ್ರಪಂಚದ ಬಗ್ಗೆ ಚಿಂತಿಸಬಹುದು. ನಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲದೇ ಇರಬಹುದು. ನಮ್ಮ ದೇಶದಲ್ಲಿನ ಬರದ ಬಗ್ಗೆ ಯೋಚಿಸಿ, ಬೇರೆ ದೇಶಗಳಲ್ಲಿ ನಡೆಯುತ್ತಿರುವ ಘಟನೆಗಳ ಬಗ್ಗೆ ಯೋಚಿಸಿ; ಜನರು ಕಾದಾಡುತ್ತಿರುವಂತಹ ಸ್ಥಳಗಳ ಬಗ್ಗೆ ಯೋಚಿಸಿ – ಎಷ್ಟೊಂದು ನೋವಿದೆ, ಎಷ್ಟೊಂದು ವೇದನೆಯಿದೆ. ಕೊನೆಯ ಪಕ್ಷ ನಾವು ಅವರಿಗಾಗಿ ಸ್ಪಂದಿಸಬಹುದು, ಬೇರೆಯವರಿಗಾಗಿ ಸ್ಪಂದಿಸಬಹುದು. ದೇವರನ್ನು ಪ್ರಾರ್ಥಿಸಿ. ನಮ್ಮ ಸ್ಪಂದನೆ ಹಾಗೂ ಪ್ರಾರ್ಥನೆಯಿಂದ ಯಾವ ಪ್ರಯೋಜನವಿಲ್ಲವೆಂದು ಯೋಚಿಸದಿರೋಣ. ನಮ್ಮ ಪ್ರಾರ್ಥನೆ ವ್ಯರ್ಥವಾಗುವುದಿಲ್ಲ. ಒಂದು ಮಾರ್ಗವಿದೆ – ನಮ್ಮಲ್ಲಿ ಹಣವಿದ್ದರೆ, ನಾವು ದಾನ ಮಾಡಬಹುದು; ನಮ್ಮಲ್ಲಿ ವಸ್ತುಗಳಿದ್ದರೆ, ಭೌತಿಕವಾಗಿ ಸಹಾಯ ಮಾಡಬಹುದು. ನಾವು ಪ್ರಪಂಚದ ದೂರದ ಮೂಲೆಗಳಿಗೆ ಹೋಗಿ ಸೇವೆ ಮಾಡುವ ಜನರನ್ನು ನೋಡಬೇಕು ಹಾಗೂ ಮೆಚ್ಚಿಕೊಳ್ಳಬೇಕು. ಜನರು ಅಲ್ಲಿಗೆ ಹೋಗುತ್ತಾರೆ. ಅಲ್ಲಿ ಕುಳಿತು ಸೇವೆ ಮಾಡುತ್ತಾರೆ. ಅವರು ಅದರ ಬಗ್ಗೆ ಮಾತನಾಡುವುದಿಲ್ಲ. ಅದು ಒಂದು ರೀತಿಯ ಸೇವೆ. ಆದರೆ ಪ್ರತಿಯೊಬ್ಬರೂ ಹಾಗೆ ಹೋಗಲು ಸಾಧ್ಯವಿಲ್ಲ; ನೀವು ಹೋಗಲು ಸಾಧ್ಯವಿಲ್ಲ, ನಾನು ಹೋಗಲು ಸಾಧ್ಯವಿಲ್ಲ. ಸಹಾನುಭೂತಿ ತೋರೋಣ. ಹಂಚಿಕೊಳ್ಳೋಣ, ಅವರ ಭಾವನೆಗಳಿಗೆ ಸ್ಪಂದಿಸೋಣ. ಇಡೀ ಭೂಮಿಯ, ಇಡೀ ವಿಶ್ವದ ಪರಿಭಾಷೆಯಲ್ಲಿ ಯೋಚಿಸೋಣ. ಇದು ನಾವು ಬೆಳೆಯುವುದಕ್ಕೆ ಸಹಾಯ ಮಾಡುತ್ತದೆ, ನಾವು ಆಧ್ಯಾತ್ಮಿಕವಾಗಿ ಬೆಳೆಯಲು ಸಹಾಯ ಮಾಡುತ್ತದೆ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಪ್ರತಿ ವರ್ಷ ನಡೆಯುವಂತೆ, ಈ ವಿಶ್ವ ಚಾನಲ್ಸ್ ದಿನವೂ ಕೂಡ ವಿಶೇಷವಾದ ಅನುಗ್ರಹ, ವಿಶೇಷವಾದ ಚೈತನ್ಯಗಳು ಹಾಗೂ ಅಸಾಧಾರಣವಾದ ಅನುಭವಗಳನ್ನು ತಂದಿತು. ಒಂದು ಶಾಲೆಯಲ್ಲಿ ನಡೆದ ಮಧ್ಯಾಹ್ನದ ಸೆಷನ್‌ವೊಂದರಲ್ಲಿ, ಮಕ್ಕಳು ಬಿಸಿಲಿನಲ್ಲಿ ಕುಳಿತು ಲೈಟ್ ಚಾನಲ್ ಮಾಡಬೇಕಾಯಿತು. ಹೊರಗೆ ಕುಳಿತುಕೊಳ್ಳುವುದು ಬಹಳ ಕಷ್ಟಕರವಾಗಿತ್ತು. ಮಕ್ಕಳ ಬಗ್ಗೆ ಕನಿಕರಗೊಂಡ ನಮ್ಮ ಕಾರ್ಯಕರ್ತರೊಬ್ಬರು ಬೆಳಕನ್ನು ಪ್ರಾರ್ಥಿಸಿದರು. ಆಶ್ಚರ್ಯವೆಂಬಂತೆ, ಮೋಡವೊಂದು ಸೂರ್ಯನನ್ನು ಮುಚ್ಚಿತು, ಮಕ್ಕಳು ಆರಾಮವಾಗಿ ಕುಳಿತು ಲೈಟ್ ಚಾನಲ್ ಮಾಡಲು ಸಾಧ್ಯವಾಯಿತು.

ಸುಡು ಬಿಸಿಲಿನಲ್ಲಿ ನಡೆದ ಮತ್ತೊಂದು ಸೆಷನ್‌ನಲ್ಲಿ, ಆಕಸ್ಮಿಕವಾಗಿ ತಂಗಾಳಿ ಬೀಸಲು ಪ್ರಾರಂಭಿಸಿತು ಹಾಗೂ ಮಕ್ಕಳಿಗೆ ಭಾರಿ ಸಮಾಧಾನವನ್ನು ತಂದಿತು.

ವಿಶ್ವದಿಂದ ಅಂತಹ ವಿಶೇಷವಾಗಿ ದೊರೆತ ಸಹಾಯದ ಹಲವಾರು ಅನುಭವಗಳಿದ್ದವು. ಈ ಅಸಾಧಾರಣ ಅನುಭವಗಳು ನಮ್ಮ ಹೃದಯಗಳಲ್ಲಿ ಕೃತಜ್ಞತೆಯನ್ನು ತುಂಬುತ್ತವೆ ಹಾಗೂ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಹರಡಲು ಹೆಚ್ಚು ಕೆಲಸ ಮಾಡುವಂತೆ ನಮ್ಮನ್ನು ಪ್ರೇರೇಪಿಸುತ್ತವೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

9ನೇ ವಿಶ್ವ ಚಾನಲ್ಸ್ ದಿನವು ಇಡೀ ಪ್ರಪಂಚಕ್ಕೆ ಸಂತೋಷ, ಹರ್ಷ ಹಾಗೂ ಶಾಂತಿಯ ಅಲೆಗಳನ್ನು ತಂದಿತು. ಪವಿತ್ರವಾದ ಆ ದಿನದಂದು ಭೂಮಿಯ ಮೇಲೆ ಬೆಳಕಿನ ಸುರಿಮಳೆಯಾಯಿತೆಂದು ನನಗನಿಸುತ್ತದೆ.

ಅದು ನಮ್ಮೆಲ್ಲರಿಗೂ ಆನಂದೋಲ್ಲಾಸದ ಅನುಭವವಾಗಿತ್ತು. ಪ್ರತಿಯೊಬ್ಬ ಕಾರ್ಯಕರ್ತನಿಗೂ ಹಂಚಿಕೊಳ್ಳಲು ವಿಶೇಷವಾದದ್ದೇನೋ ಇತ್ತು. ಒಂದು ಪ್ರಸಂಗದಲ್ಲಿ, ನಮ್ಮ ಕಾರ್ಯಕರ್ತರೊಬ್ಬರು ಲೈಟ್ ಚಾನಲಿಂಗ್ ಸೆಷನ್ ಮುಗಿಸಿ ಶಾಲೆಯಿಂದ ಹೊರಬರುವಾಗ ಇಡೀ ಶಾಲೆ ಜಯಕಾರ ಮಾಡಿತು. ಈ ಅನುಭವದಿಂದ ಆಕೆ ಪುಳಕಗೊಂಡರು. ವಿದ್ಯಾರ್ಥಿಗಳು ಆಗಿಂದಾಗ್ಗೆ ನಮ್ಮ ಹಲರಾರು ಕಾರ್ಯಕರ್ತರನ್ನು ಲೈಟ್ ಟೀಚರ್ಸ್ ಎಂದು ಆತ್ಮೀಯತೆಯಿಂದ ಸ್ವಾಗತಿಸುತ್ತಾರೆ. ಅಂತಹ ಅನೇಕ ಮರೆಯಲಾಗದ ಅನುಭವಗಳು ಕಾರ್ಯಕರ್ತರ ಜೀವನದಲ್ಲಿವೆ. ಅಂತಹ ಕ್ಷಣಗಳು ವಿಶ್ವದಿಂದ ಬಂದ ಉಡುಗೊರೆಯೆಂದು ನಾನು ಭಾವಿಸುತ್ತೇನೆ.

ಈ ಬೆಳಕಿನ ಸಂಚಲನವನ್ನು ಹರಡುವ ನಮ್ಮ ಪ್ರಯತ್ನದಲ್ಲಿ ನಮ್ಮ ಜೊತೆಯಾಗಿರುವ ಎಲ್ಲಾ ಶಾಲೆಗಳಿಗೆ, ಸಂಸ್ಥೆಗಳಿಗೆ, ಅಧಿಕಾರಿಗಳಿಗೆ, ಮಕ್ಕಳಿಗೆ ಹಾಗೂ ಹಿರಿಯರಿಗೆ ನಾವು ವಂದಿಸುತ್ತೇವೆ.


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077, ಭಾರತ.

ಫೋನ್: (080) 2846 5280, 99000 75280 (10am to 5pm), ಇ–ಮೇಲ್: info@lightagemasters.com

website : www.lightagemasters.com, www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಾಗಿಲ್ಲ.

### ಬೆಂಗಳೂರು

**ಸೋಮವಾರದಿಂದ ಶುಕ್ರವಾರದವರೆಗೆ (ಸಂಜೆ 7 - 7.15)**
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ, ಮಲ್ಲೇಶ್ವರಂ
☎ 9084121545 ಶ್ರೀ ಕೆ. ಚಂದ್ರಶೇಖರ್

**ಸೋಮವಾರ (ಸಂಜೆ 6.30 - 7)**
ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಬುಧವಾರ (ಸಂಜೆ 6.30 - 7)**
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

**ಶುಕ್ರವಾರ (ಸಂಜೆ 6.30 - 7)**
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ ಭೋಸೇಕರ್

**ಶುಕ್ರವಾರ (ಮಧ್ಯಾಹ್ನ 12.00)**
ಸಿದ್ಧಿ ವಿನಾಯಕ ದೇವಸ್ಥಾನ, 59/1,
ಹಚಿನ್ಸ್ ರಸ್ತೆ, 3ನೇ ಅಡ್ಡರಸ್ತೆ, ಕೂಕ್ ಟೌನ್
☎ 9980205803 ಶ್ರೀಮತಿ ನಿರ್ಮಲ ಬಾಲ

**ಶನಿವಾರ (ಸಂಜೆ 6.30 - 7)**
ಬಲಮುರಿ ಮಹಾಗಣಪತಿ, ಶ್ರೀ ರಾಜರಾಜೇಶ್ವರಿ ಮತ್ತು ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ,
8ನೇ ಅಡ್ಡರಸ್ತೆ, ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸ್ಯಾಟ್‌ಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟೀಲ್ ಕೆ.

ಲಕ್ಷಾಂತರ ಜನರು ನಿಯತವಾದ ಲೈಟ್ ಚಾನಲಿಂಗ್ ಅಭ್ಯಾಸದಿಂದ ಪ್ರಯೋಜನಗಳನ್ನು ಪಡೆದಿದ್ದಾರೆ. ಅನೇಕರು ಸೋಜಿಗವೆನಿಸುವಂತಹ ಸಹಾಯವನ್ನು ಹಾಗೂ ಅದ್ಭುತವಾದ ಅನುಭವಗಳನ್ನು ಪಡೆದಿದ್ದಾರೆ. ನಿಮ್ಮ ಅನುಭವಗಳು ಇತರರಿಗೆ ಸ್ಫೂರ್ತಿ ನೀಡಬಹುದು ಹಾಗೂ ಮಾರ್ಗದರ್ಶನ ಕೂಡ ಮಾಡಬಹುದು. ದಯವಿಟ್ಟು ನಿಮ್ಮ ಅನುಭವಗಳನ್ನು ನಮ್ಮ ಜೊತೆ ಹಂಚಿಕೊಳ್ಳಿ. ನಮ್ಮ ಇ–ಮೇಲ್ info@lightagemasters.com ಗೆ ಬರೆಯಿರಿ.


2019ರ ವಿಶ್ವ ಚಾನಲ್ಸ್ ದಿನದ ಯಶಸ್ವಿನ ಸಂಭ್ರಮಾಚರಣೆಯಲ್ಲಿ ಭಾಗವಹಿಸಿದ ಕಾರ್ಯಕರ್ತರು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ನಾವು ಅತಿರೇಕದಲ್ಲಿ ಬದುಕನ್ನು ನಡೆಸಿದಾಗ, ಜೀವನದ ಒಂದು ಭಾಗವನ್ನು ಮಾತ್ರ ಜೀವಿಸುತ್ತೇವೆ, ಸಂಪೂರ್ಣವಾಗಿಯಲ್ಲ.
- ನಾವು ಜನರ ಬಗ್ಗೆ ಅಕ್ಕರೆಯಿಂದಿರಬಹುದು. ನಾವು, ಜನರು, ಸ್ಥಳಗಳು ಹಾಗೂ ಏನನ್ನಾದರೂ ಪ್ರೀತಿಸಬಹುದು, ಆದರೆ ಯಾವುದಕ್ಕೂ ಅಂಟಿಕೊಳ್ಳದೇ ಇರಬೇಕು. ನಮ್ಮಲ್ಲಿ ಒಡೆತನದಾಶೆಯಿದ್ದರೆ (possession), ನಮ್ಮ ಸ್ವಾಮ್ಯದಲ್ಲಿಟ್ಟುಕೊಳ್ಳಲು ಬಯಸಿದರೆ, ಅದೇ ಅಕ್ಕರೆಯು ಒಂದು ರೀತಿಯ ಬಂಧನವಾಗಿ ಪರಿಣಮಿಸುತ್ತದೆ.
- ಹತಾಶೆಯನ್ನು ನಿಭಾಯಿಸುವ ಒಂದು ಸರಳವಾದ ವಿಧಾನವೆಂದರೆ ದೇವರ ಜೊತೆ ಸಂಬಂಧವನ್ನು ಬೆಳೆಸಿಕೊಳ್ಳುವುದು. ಅವನಿಂದ ಸಹಾಯವನ್ನು ಕೇಳಿದರೆ, ಅದು ನಮಗೆ ಸಿಗುತ್ತದೆ. ಕೆಲವೊಂದು ವೇಳೆ ತಡವಾಗಬಹುದು, ಆದರೆ ನಮಗೆ ಯಾವಾಗಲೂ ಸಹಾಯ ಸಿಗುತ್ತದೆ.
- ಪ್ರೀತಿ, ಸತ್ಯ, ಶಾಂತಿ ಹಾಗೂ ವೈರಾಗ್ಯಗಳು ನಮ್ಮ ಸಹಜ ಗುಣಗಳು. ಪ್ರತಿಯೊಂದು ರೀತಿಯಲ್ಲಿಯೂ ಪರಿಶುದ್ಧರಾಗಿರುವುದೂ ಕೂಡ ನಮ್ಮ ಸಹಜ ಸ್ವಭಾವ. ಕನಸು ಕಾಣುವುದೂ ಸಹ ನಮ್ಮ ಸಹಜ ಸ್ವಭಾವ! ಕನಸು ಕಾಣಿರಿ, ದೃಶ್ಯೀಕರಿಸಿಕೊಳ್ಳಿ (visualize), ಮಹತ್ವಾಕಾಂಕ್ಷೆಯನ್ನು ಬೆಳೆಸಿಕೊಳ್ಳಿ, ಇಡೀ ಪ್ರಪಂಚಕ್ಕಾಗಿ ಕನಸು ಕಾಣಿರಿ. ದೇವರು ಮತ್ತು ಪರಿಪೂರ್ಣತೆಯೆಡೆಗೆ ಸಾಗುವುದೂ ಕೂಡ ನಮ್ಮ ಸಹಜ ಸ್ವಭಾವ.
- ಪ್ರಾರ್ಥನೆಯೆಂದರೆ ಅನುಗ್ರಹವನ್ನು ಬೇಡುವುದು. ಸಹಾಯಕ್ಕಾಗಿ ನಾವು ದೇವರ ಅನುಗ್ರಹವನ್ನು ಬೇಡುತ್ತೇವೆ. ಅವನು ತನ್ನದೇ ಆದ ರೀತಿಯಲ್ಲಿ ಹಾಗೂ ತನ್ನದೇ ಆದ ಸಮಯದಲ್ಲಿ ಪ್ರತಿಕ್ರಿಯಿಸುತ್ತಾನೆ. ಇದನ್ನು ನಾವು ಒಪ್ಪಿಕೊಳ್ಳಬೇಕು. ಅನ್ಯ ಮಾರ್ಗವಿಲ್ಲ.
- ಧ್ಯಾನ ನಮ್ಮಲ್ಲಿರುವ ಉತ್ತಮವಾದುದನ್ನು ಹೊರತರುತ್ತದೆ. ಅವುಗಳೆಂದರೆ – ಪ್ರೀತಿ, ನಿಸ್ವಾರ್ಥತೆ, ಶಾಂತಿ, ಉದಾತ್ತತೆ, ಪ್ರಾಮಾಣಿಕತೆ, ಸಹನೆ, ಹೊಂದಾಣಿಕೆ, ಬೇರೆಯವರ ಬಗ್ಗೆ ಗೌರವ ಹಾಗೂ ಒಳ್ಳೆಯದೆನ್ನುವ ಎಲ್ಲವನ್ನೂ ಅದು ಹೊರತರುತ್ತದೆ.
- ಈ ಭೂಮಿಯ ಮೇಲೆ ಯಾವುದೇ ತಂತ್ರದಿಂದ ಸಕ್ರಿಯಗೊಳಿಸಲಾಗದ ಬಹಳ ಸೂಕ್ಷ್ಮವಾದ ಆಧ್ಯಾತ್ಮಿಕ ಪ್ರಕ್ರಿಯೆಗಳನ್ನು ಪ್ರೀತಿ ಸಕ್ರಿಯಗೊಳಿಸುತ್ತದೆ. ಈ ಪ್ರೀತಿಯೇ ಇಡೀ ಸೃಷ್ಟಿಯನ್ನು ಹೊರ ತಂದಿದೆ.

–ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | | |
|---|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | : | 5682 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | : | 29.42 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | : | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | : | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

# 9ನೇ ವಿಶ್ವ ಚಾನಲ್ಸ್ ದಿನದ ಒಂದು ವರದಿ

ಮನೋಜ್ ಕುಮಾರ್ ಚೋಪ್ರ; ಅನು: ಶ್ರೀದೇವಿ

ವಿಶ್ವ ಚಾನಲ್ಸ್ ದಿನವು ಈ ಭೂಮಿಯ ಮೇಲೆ ಶಾಂತಿ ಮತ್ತು ಪ್ರೀತಿಯನ್ನು ಹರಡುವ ದಿನವಾಗಿದೆ. ಈ ಭೂಮಿಯ ಮೇಲೆ ಹೊಸ ಯುಗವನ್ನು ಸ್ಥಾಪಿಸುವುದು ನಮ್ಮ ಮಹರ್ಷಿ ಅಮರರವರ ಕನಸಾಗಿತ್ತು. ಪ್ರತಿ ವಿಶ್ವ ಚಾನಲ್ಸ್ ದಿನವೂ ಹೊಸಯುಗದೆಡೆಗೆ ಇಡುವ ಮುಂದಿನ ಹೆಜ್ಜೆಯಾಗಿದೆ. ಮನುಕುಲಕ್ಕೆ, ಬೆಳಕನ್ನು ಆಯ್ಕೆಮಾಡಿಕೊಳ್ಳುವ ಹಾಗೂ ಪ್ರೀತಿಯನ್ನು ಅಭಿವ್ಯಕ್ತಗೊಳಿಸುವ ಪರೀಕ್ಷೆ ಕೂಡ ಇದಾಗಿದೆ; ಬೆಳಕು ಮತ್ತು ಪ್ರೀತಿ ಈ ಭೂಮಿಯ ಭವಿಷ್ಯವಾಗಿದೆ.

ಪ್ರತಿ ವರ್ಷದಂತೆ, ಈ ದಿನವನ್ನು, ನಮ್ಮ ಪ್ರೀತಿ ಹಾಗೂ ಚೈತನ್ಯಗಳನ್ನು ಮಹರ್ಷಿ ಅಮರರವರಿಗೆ ಅರ್ಪಿಸುವುದರ ಮೂಲಕ ಬೆಳಿಗ್ಗೆ 6 ಗಂಟೆಗೆ ಪ್ರಾರಂಭಿಸಿದೆವು. ಗಾಢವಾದ ನಿಶ್ಚಲತೆ ವಾತಾವರಣದಲ್ಲಿತ್ತು. ಮರಗಳು, ಆಕಾಶ, ಪಕ್ಷಿಗಳು, ಕೆರೆಗಳು, ರಸ್ತೆಗಳು ಇತ್ಯಾದಿಗಳು ಆ ದಿನಕ್ಕೆ ಪೂರ್ತಿಯಾಗಿ ಶ್ರುತಿಗೊಂಡಂತೆ ಕಾಣುತ್ತಿದ್ದವು. ಮಹರ್ಷಿ ಅಮರರವರ ಶತಮಾನೋತ್ಸವದಂದು ವಿಶೇಷವಾದ ಕೊಡುಗೆಯನ್ನು ಈ ಮಹಾನ್ ಮಹರ್ಷಿಗೆ ನೀಡಲು ವಿಶ್ವವೂ ಕೂಡ ಜೊತೆಗೂಡಿತೆಂದು ನನಗೆ ಅನಿಸಿತು. ಬೆಳಿಗ್ಗೆ ಸುಮಾರು 7.15ರ ಹೊತ್ತಿಗೆ ಮೊದಲ ಲೈಟ್ ಚಾನಲಿಂಗ್ ಸೆಷನ್ ಪ್ರಾರಂಭವಾಯಿತು ಹಾಗೂ ಸಂಜೆಯ ತನಕವೂ ಸೆಷನ್‌ಗಳು ಮುಂದುವರೆದವು. ಬೆಂಗಳೂರು, ತುಮಕೂರು, ಕೌಜಲಗಿ, ಮಧುರೈ, ವಿಶಾಖಪಟ್ಟಣ, ನೆಲ್ಲೂರು, ಚೆನ್ನೈ ಹಾಗೂ ಹೈದರಾಬಾದ್‌ಗಳಿಂದ ಲೈಟ್ ಚಾನಲಿಂಗ್ ಸೆಷನ್‌ಗಳ ಬಗ್ಗೆ ಸುದ್ದಿ ಬರಲಾರಂಭಿಸಿತು. ಪಶ್ಚಿಮ ಇಂಡಿಯಾದ ಮುಂಬೈ, ಪುಣೆ, ಸಾಂಗ್ಲಿ, ಸೋಲಾಪುರ, ಅಮರಾವತಿ ಹಾಗೂ ಮಹಾರಾಷ್ಟ್ರದ ಇತರೆ ಭಾಗಗಳಲ್ಲೂ ಕೂಡ ಲೈಟ್ ಚಾನಲಿಂಗ್ ನಡೆಸಲಾಯಿತು. ಉತ್ತರ ಭಾರತದಲ್ಲಿನ ನಮ್ಮ ಕಾರ್ಯಕರ್ತರು ದೆಹಲಿ, ರಾಜಾಸ್ಥಾನ ಮತ್ತು ಉತ್ತರ ಪ್ರದೇಶಗಳಲ್ಲಿ ಅನೇಕ ಸೆಷನ್‌ಗಳನ್ನು ನಡೆಸಿದರು. ದಶಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಹಿರಿಯರು ಆ ದಿನ ಲೈಟ್ ಚಾನಲ್ ಮಾಡಿದರು. 2400ಕ್ಕೂ ಹೆಚ್ಚಿನ ಶಾಲೆಗಳು ಈ ಅಸಾಧಾರಣವಾದ ಘಟನೆಯಲ್ಲಿ ಭಾಗವಹಿಸಿದವು. ಇದು ಮಹರ್ಷಿ ಅಮರರವರಿಗೆ ಅವರ 100ನೇ ಜನ್ಮದಿನದಂದು ನೀಡಿದ ಬಹು ದೊಡ್ಡ ಉಡುಗೊರೆಯೆಂದು ನಾನು ಭಾವಿಸುತ್ತೇನೆ. ಎಲ್ಲೆಡೆ ಸಂತೋಷ ಮತ್ತು ಹರ್ಷ ತುಂಬಿತ್ತು.

9ನೇ ವಿಶ್ವ ಚಾನಲ್ಸ್ ದಿನದ ಅಂಗವಾಗಿ ನಮ್ಮ ಕಾರ್ಯಕರ್ತರಲ್ಲಿ ಅತಿಯಾದ ಸಂಭ್ರಮ ಮತ್ತು ಉತ್ಸಾಹ ತುಂಬಿತುಳುಕುತ್ತಿತ್ತು. ಆ ದಿನಕ್ಕಾಗಿ ಅವರು ವಿಶೇಷವಾದ ರೀತಿಯಲ್ಲಿ ಮುಂಚಿತವಾಗಿಯೇ ಸಿದ್ಧರಾಗಿದ್ದರು. ಅನೇಕ ತಂಡಗಳು ತಮ್ಮ ಯೋಜನೆಗಳನ್ನು ಹಲವು ತಿಂಗಳುಗಳ ಮೊದಲೇ ನಿರೂಪಿಸಿದ್ದವು. ತಮ್ಮ ಯೋಜನೆಯು ಪರಿಪೂರ್ಣತೆಯನ್ನು ತಲುಪಲು ಅವರು ಬಹಳವಾಗಿ ಶ್ರಮಿಸಿದರು. ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಮಾಡಿದರು. ಅವರ ದೃಢಸಂಕಲ್ಪ ಪರ್ವತಗಳಿಗಿಂತ ಎತ್ತರವಾಗಿತ್ತು. ಅವರ ಇಚ್ಛಾಶಕ್ತಿ ಮತ್ತು ಋಷಿಗಳ ಅನುಗ್ರಹವು, ಈ ಹಾದಿಯಲ್ಲಿ ಬಂದಂಥ ಎಲ್ಲಾ ಅಡಚಣೆಗಳನ್ನು ನಿವಾರಿಸಿದವು. ನಾವೆಲ್ಲಾ ಒಂದೇ ತಂಡವೆಂದು ಭಾವಿಸುವ ನಮ್ಮ ಕಾರ್ಯಕರ್ತರ ನಡುವಿನ ಪ್ರೀತಿ ಮತ್ತು ಸಂಯೋಜಕಶಕ್ತಿಯು ಈ ಕೆಲಸದ ಮೇಲೆ ಪರಿಣಾಮ ಬೀರಿತು.

ನಮ್ಮ ಕಾರ್ಯಕರ್ತರು ಸಾವಿರಕ್ಕೂ ಹೆಚ್ಚು ಶಾಲೆಗಳಿಗೆ ಸ್ವತಃ ತಾವೇ ಭೇಟಿ ನೀಡಿ ವಿಶ್ವ ಚಾನಲ್ಸ್ ದಿನದಂದು ಭಾಗವಹಿಸಲು ಅವರನ್ನು ಕೋರಿದರು. ಆಶ್ಚರ್ಯವೆಂದರೆ, ಶಾಲೆಗಳೂ ಸಹ ಅದೇ ರೀತಿಯ ನಿರೀಕ್ಷಣೆಯಲ್ಲಿದ್ದು ಉತ್ಸಾಹವನ್ನು ತೋರಿದವು. ಅವರು ನಮ್ಮ ಕಾರ್ಯಕರ್ತರನ್ನು ಸ್ವಾಗತಿಸಿದರು ಹಾಗೂ ಆ ದಿನ ತಾವೇ ಚಾನಲಿಂಗ್‌ನಲ್ಲಿ ಭಾಗವಹಿಸುವುದಾಗಿ ಭರವಸೆ ನೀಡಿದರು. ವಿಶ್ವ ಚಾನಲ್ಸ್ ದಿನದಂದು ಅನೇಕ ಶಾಲೆಗಳು, ಫೋಟೋ, ಮೆಸೇಜ್ ಮತ್ತು ವೀಡಿಯೋಗಳನ್ನು WhatsApp ನಲ್ಲಿ ಕಳುಹಿಸಿ ತಾವು ಭಾಗವಹಿಸಿದ್ದನ್ನು ದೃಢಪಡಿಸಿದವು. ಚೆನ್ನೈನಲ್ಲಿ ಮುಷ್ಕರವಿದ್ದರೂ ಕೂಡ ಅಲ್ಲಿನ ಅನೇಕ ಶಾಲೆಗಳು ಲೈಟ್ ಚಾನಲಿಂಗ್‌ನಲ್ಲಿ ಭಾಗವಹಿಸಿದವು. ಮುಂಬೈನ NGOಗೆ ಸೇರಿದ 198 ಶಾಲೆಗಳು, ತಮ್ಮ ಶಾಲಾ ಸಂಯೋಜಕರ ಸಹಾಯದಿಂದ ವಿಶ್ವ ಚಾನಲ್ಸ್ ದಿನದಂದು ಭಾಗವಹಿಸಿದವು. ಈ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡು ಭಾಗವಹಿಸಿದ ಶಾಲೆಗಳ ಹಾಗೂ ಸಂಸ್ಥೆಗಳ ಅಧಿಕಾರಿಗಳಿಗೆ ಮತ್ತು ಇತರೆ ಲೈಟ್ ಚಾನಲ್‌ಗಳಿಗೆ ನಾವು ಆಭಾರಿಯಾಗಿದ್ದೇವೆ. ಅವರು ನಮಗೆ ತೋರಿಸಿದ ಪ್ರೀತಿ ಮತ್ತು ಸಹಕಾರ ನಮ್ಮನ್ನು ಮೂಕರನ್ನಾಗಿಸುತ್ತದೆ.

ಮಕ್ಕಳ ಸಂಖ್ಯೆ ಮಾತ್ರವಲ್ಲದೇ ಚಾನಲ್ ಮಾಡುವಾಗಿನ ತೀವ್ರತೆಯು ಕೂಡ ಈ ಪ್ರಪಂಚದ ಮೇಲೆ ಪರಿಣಾಮ ಬೀರುತ್ತದೆಂದು ನಾನು ಯಾವಾಗಲೂ ನಂಬುತ್ತೇನೆ. ಎಲ್ಲಕ್ಕಿಂತ ಮಿಗಿಲಾಗಿ, ನಮ್ಮ ಸೂಕ್ಷ್ಮ ಲೋಕದ ಮಾಸ್ಟರ್‌ಗಳ ಉಪಸ್ಥಿತಿ ಎಲ್ಲವನ್ನೂ ಮಾಡಿಸುತ್ತದೆ. 9ನೇ ವಿಶ್ವ ಚಾನಲ್ ದಿನದ ನಂತರ ಪ್ರಪಂಚ ಮೊದಲಿನಂತೆಯೇ ಇರುವಂತೆ ತೋರಬಹುದು. ಆದರೆ ಇಂತಹ ಬೃಹತ್ ಚಾನಲಿಂಗ್ ಹಾಗೂ ಮಹಾನ್ ಮಾಸ್ಟರ್‌ಗಳ ಇರುವಿಕೆಯು ಅನೇಕ ಜನರ ನೋವು ಮತ್ತು ಕಣ್ಣೀರನ್ನು ಒರೆಸಿದೆ ಎಂದು ನನಗೆ ಖಾತರಿಯಾಗಿದೆ. ಪ್ರಪಂಚದ ಹಲವಾರು ಕ್ಲಿಷ್ಟಕರವಾದ ಸಮಸ್ಯೆಗಳಿಗೆ ಪರಿಹಾರ ದೊರಕಿರಬಹುದು.

ಈ ಸುಂದರವಾದ ಕಾರ್ಯವನ್ನು ಮುಂದುವರೆಸೋಣ ಹಾಗೂ ನಮ್ಮ ಮಹರ್ಷಿ ಅಮರರವರ ಕನಸನ್ನು ನನಸಾಗಿಸೋಣ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಯಾವುದಾದರೊಂದು ಲೈಟ್ ಚಾನಲಿಂಗ್ ಕೇಂದ್ರದಲ್ಲಿ ವಾರಕ್ಕೆ ಒಮ್ಮೆ ಲೈಟ್ ಚಾನಲ್ ಮಾಡಲು ದಯವಿಟ್ಟು ನಮ್ಮ ಜೊತೆಗೂಡಿ ಹಾಗೂ ಶಾಂತಿ ಮತ್ತು ಪ್ರೀತಿಯ ಕಂಪನಗಳನ್ನು ಹರಡಲು ಮತ್ತು ಬಲಗೊಳಿಸಲು ಸಹಾಯ ಮಾಡಿ. ನಿಮ್ಮ ಕುಟುಂಬದ ಸದಸ್ಯರು ಹಾಗೂ ಸ್ನೇಹಿತರೊಂದಿಗೆ ಈ ವಾರ್ತಾಪತ್ರವನ್ನು ಹಂಚಿ ಕೊಳ್ಳಿ. ಉಚಿತವಾದ PDF ರೂಪದ ಈ ವಾರ್ತಾಪತ್ರವನ್ನು ನಮ್ಮ ವೆಬ್‌ಸೈಟ್ www.lightchannels.com ನಿಂದ ಡೌನ್‌ಲೋಡ್ (download) ಮಾಡಿಕೊಳ್ಳ ಬಹುದು.

### ಸೋಲಾಪೂರ್

**ಸೋಮವಾರ ಮತ್ತು ಗುರುವಾರ (ಸಂಜೆ 7 - 7.15)**

ಬಾಲಗಣೇಶ್ ಮಂದಿರ, ಬುಶರ್ ಪೇಠ್, ಮೊಹೋಲ್

☎ 09860967066 ಶ್ರೀ ವಿವೇಕಾನಂದ ಸ್ವಾಮಿ

☎ 09970800279 ಶ್ರೀಮತಿ ಸ್ವರೂಪ ಸ್ವಾಮಿ

### ಮೀರಜ್

**ಗುರುವಾರ (ಸಂಜೆ 7.45)**

ಶ್ರೀ ಶಿವರುದ್ರ ಬಿ. ಬೆಲಗನ್ವಿ,
A-Gat Plot No-135,
C/o ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ

☎ 9822421463 ಶ್ರೀ ಮಹಾಜನ್

### ಚೆನ್ನೈ

**ಶನಿವಾರ (ಬೆಳಿಗ್ಗೆ 10 - 10.30)**

ನಂ. 481, ಸಾಯಿಪ್ರೇಮ್, 19ನೇ ರಸ್ತೆ,
4ನೇ ಸೆಕ್ಟರ್, ಕೆ. ಕೆ. ನಗರ

☎ 9444880409 ಶ್ರೀಮತಿ ರಾಜಲಕ್ಷ್ಮಿ ಆರ್

### ಪುಣೆ

**ಶನಿವಾರ (ಸಂಜೆ 7 - 7.30)**

3-B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ

☎ 9011038169 ಶ್ರೀ ಆಶುತೋಶ್ ನವನ್‌ಗುಲ್

ಅನೇಕ ಮಕ್ಕಳ, ಶಿಕ್ಷಕರ ಹಾಗೂ ಕಾರ್ಯಕರ್ತರ ಅನುಭವಗಳನ್ನು 'Experiences of Light Channels' ಎಂಬ ಪುಸ್ತಕದಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕ ಹೊರತಂದ ಮೇಲೆ ಮತ್ತೆ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡಾಗ, ಎರಡನೆಯ ಸಂಪುಟವನ್ನು ಹೊರ ತರಲಾಯಿತು. ಈ ಎರಡೂ ಸಂಪುಟಗಳನ್ನು ನಮ್ಮ ವೆಬ್‌ಸೈಟ್ www.lightagemasters.com ನಿಂದ ಉಚಿತವಾಗಿ ಡೌನ್‌ಲೋಡ್ (download) ಮಾಡಿಕೊಳ್ಳಬಹುದು.



## ಅನುಭವಗಳು

ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ

ಕಳೆದ ಕೆಲವು ತಿಂಗಳುಗಳಿಂದ ನಾನು ಸೊಂಟದ ನೋವಿನಿಂದ ಬಳಲುತ್ತಿದ್ದೇನೆ. ಹತ್ತು ನಿಮಿಷಗಳ ಕಾಲ ನಿಲ್ಲುವುದಕ್ಕೂ ನನಗೆ ಸಾಧ್ಯವಾಗುತ್ತಿರಲಿಲ್ಲ. ಡಾಕ್ಟರ್‌ರನ್ನು ಭೇಟಿ ಮಾಡಿದೆ ಮತ್ತು ಸಹಾಯಕ್ಕಾಗಿ ಬೆಳಕನ್ನೂ ಪ್ರಾರ್ಥಿಸಿದೆ. ನಾಲ್ಕು ಜನ ಹೆಸರಾಂತ ವೈದ್ಯರುಗಳು ನಡೆಸಿಕೊಡುವ ಉಪನ್ಯಾಸಗಳ ಕಾರ್ಯಕ್ರಮಕ್ಕೆ ಹೋಗಲು ಯೋಜಿಸಿದ್ದೆ. ಉಪನ್ಯಾಸಗಳನ್ನು ನೀಡುವವರಲ್ಲಿ ಡಾ॥ ಆಮಾಟೆ ಮತ್ತು ಡಾ॥ ಭರತ್ ವಾಟ್ವಾನಿ ಇದ್ದರು. ನಾನು ಸಮಯಕ್ಕೆ ಸರಿಯಾಗಿ ಹೋದೆ, ಆದರೆ ಸಭಾಂಗಣ ಭರ್ತಿಯಾಗಿದ್ದು, ಒಂದು ಸೀಟೂ ಖಾಲಿ ಇರಲಿಲ್ಲ. ಹಿಂದುಗಡೆ ನಿಂತುಕೊಳ್ಳಬೇಕಾಯಿತು. ನನಗೆ ಹತ್ತು ನಿಮಿಷ ನಿಲ್ಲಲೂ ಸಾಧ್ಯವಾಗುವುದಿಲ್ಲವೆಂದು ಗೊತ್ತಿತ್ತು. ಸ್ವಲ್ಪ ಸಮಯದ ನಂತರ ಸೊಂಟದ ನೋವು ಪ್ರಾರಂಭವಾಯಿತು. ನನಗೆ ದುಃಖವಾಯಿತು, ಆದರೆ ನನಗೆ ಕಾರ್ಯಕ್ರಮವನ್ನು ಬಿಟ್ಟು ಹೋಗುವುದಕ್ಕೆ ಮನಸ್ಸಾಗಲಿಲ್ಲ. ಆಗ ನಾನು ಕಣ್ಣುಗಳನ್ನು ಮುಚ್ಚಿಕೊಂಡು ಬೆಳಕನ್ನು ನನ್ನೊಳಗೆ ಪ್ರವೇಶಿಸುವಂತೆ ಪ್ರಾರ್ಥಿಸಿದೆ. ನನ್ನ ಶರೀರದಲ್ಲಿ ಬೆಳಕನ್ನು ತುಂಬಿಕೊಂಡು, ನನಗೆ ಸಹಾಯ ಮಾಡುವಂತೆ ಬೆಳಕನ್ನು ಕೇಳಿಕೊಂಡೆ. ಆಶ್ಚರ್ಯವೆಂಬಂತೆ ನೋವಿನ ತೀವ್ರತೆ ನಿಧಾನವಾಗಿ ಕಡಿಮೆಯಾಯಿತು ಹಾಗೂ ಮುಂದೆ ನಲವತ್ತು ನಿಮಿಷಗಳವರೆಗೆ ನಿಲ್ಲಲೂ ನನಗೆ ಸಾಧ್ಯವಾಯಿತು. ಕಾರ್ಯಕ್ರಮ ನನಗೆ ಸಂತೋಷ ತಂದಿತು. ನಮ್ಮ ಪ್ರೀತಿಯ ಗುರೂಜಿಯವರ ಇರುವಿಕೆಯ ಅನುಭವವಾದ ಕಾರಣ ಅದೊಂದು ಮಹಾನ್ ಸಂಜೆಯೆನಿಸಿತು. ಬೆಳಕು ಸಹಾಯ ಮಾಡಿತು ಎಂದು ನನಗೆ ತಿಳಿದಿದೆ.

–ಸಂತೋಷ್ ಕೋರೆ, ಕಾರ್ಯಕರ್ತ

ಒಂದು ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸುವುದಕ್ಕೆ ಅನುಮತಿಯನ್ನು ಪಡೆದುಕೊಂಡಿದ್ದೆ. ಆದರೆ ಆ ದಿನ ಬೆಳಿಗ್ಗೆ ಮೈಯಲ್ಲಿ ಆಲಸ್ಯವಿತ್ತು ಹಾಗೂ ವಾಂತಿ ಶುರುವಾಯಿತು. ನಾನು ಸಮಾಧಾನದಿಂದ ಬೆಳಕಿಗೆ ಮತ್ತು ಮಾಸ್ಟರ್‌ಗಳಿಗೆ ಪ್ರಾರ್ಥಿಸಿದೆ. ನಾನು ಗುಣಮುಖಳಾಗಿ ಲೈಟ್ ಚಾನಲಿಂಗ್ ಸೆಷನ್ ನಡೆಸಿಕೊಡುವುದಕ್ಕೆ ಸಾಧ್ಯವಾಯಿತು.

–ಪದ್ಮಜ ಬಾಜ್‌ಪೈ, ಕಾರ್ಯಕರ್ತೆ

ಬೆಳಕು ಬಹಳ ಶಕ್ತಿಯುತವಾಗಿದ್ದು ನಮ್ಮ ಜೀವನದಲ್ಲಿ ನಾವು ಹುಡುಕುವ ಮಾರ್ಗಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ನಮ್ಮ ಭಾವನೆಗಳನ್ನು, ಸಮಸ್ಯೆಗಳನ್ನು, ಆಲೋಚನೆಗಳನ್ನು ಬೆಳಕಿನ ಜೊತೆ ಹಂಚಿಕೊಂಡಾಗ ತಕ್ಷಣವೇ ನಮ್ಮ ಅವಶ್ಯಕತೆಗಳಿಗೆ ನಾವು ಸಂಪರ್ಕ ಪಡೆದುಕೊಳ್ಳುತ್ತೇವೆ. ಬೆಳಕು ಸಂಪೂರ್ಣವಾಗಿ ಸಕಾರಾತ್ಮಕ ಚೈತನ್ಯಗಳಿಂದ ತುಂಬಿರುವುದರಿಂದ ಜೀವನದಲ್ಲಿ ಬರುವ ಎಲ್ಲಾ ಸಮಸ್ಯೆಗಳಿಗೆ ಪರಿಹಾರಗಳನ್ನು ನಾವು ಕಂಡುಕೊಳ್ಳಬಹುದೆಂದು ನಾನು ನಂಬುತ್ತೇನೆ. ನನ್ನ ಜೊತೆಗೆ ನನ್ನ ಸಹೋದ್ಯೋಗಿಗಳಿಗೂ ಮತ್ತು ವಿದ್ಯಾರ್ಥಿಗಳಿಗೂ ಈ ಸಕಾರಾತ್ಮಕ ಚೈತನ್ಯವು ಪ್ರವಹಿಸುತ್ತಿರುವುದರ ಅನುಭವವಾಗಿದೆ. ನಿಯತವಾದ ಲೈಟ್ ಚಾನಲಿಂಗ್‌ನ ಅಭ್ಯಾಸವು ಶಾಂತಿ, ಸಂತೋಷವನ್ನು ತರುತ್ತದೆ ಹಾಗೂ ಮನಸ್ಸಿಗೆ ಮತ್ತು ಆತ್ಮಕ್ಕೆ ಪವಿತ್ರ ಭಾವನೆಯನ್ನು ನೀಡುತ್ತದೆ.

–ಹೇಮಾವತಿ, ಮುಖ್ಯೋಪಾಧ್ಯಾಯರು, ನಳಂದ ಇಂಗ್ಲೀಷ್ ಹೈಸ್ಕೂಲ್, ಕುರುಬರಹಳ್ಳಿ, ಬೆಂಗಳೂರು

ನಮ್ಮ ಶಾಲೆಯ ವಿದ್ಯಾರ್ಥಿಯಾದ ದರ್ಶನ್, ನಮ್ಮ ಶಾಲೆಯ ಹೊರಗಿನ ಯಾವುದೇ ಟ್ಯೂಷನ್‌ನ ಸಹಾಯ ಪಡೆಯದೇ, ಪರೀಕ್ಷಾ ಮಂಡಳಿ ನಡೆಸುವ 2017–18ನೇ ಸಾಲಿನ 10ನೇ ತರಗತಿಯ ಪರೀಕ್ಷೆಯಲ್ಲಿ ಶೇಕಡಾ 94 ಅಂಕಗಳನ್ನು ಪಡೆದುಕೊಂಡು ನಮ್ಮ ಶಾಲೆಗೆ ಕೀರ್ತಿ ತಂದುಕೊಟ್ಟಿದ್ದಾನೆ. ಅವನು ನಮ್ಮ ಶಾಲೆಯಲ್ಲಿಯೇ ಕೊಡುವ ತರಬೇತಿಯ ಸಹಾಯದಿಂದ ಅಭ್ಯಾಸ ಮಾಡಿ ಪರೀಕ್ಷೆಗೆ ಸಿದ್ಧನಾಗಿದ್ದನು. ಈ ಸಾಧನೆಯ ಹಿಂದೆ ಲೈಟ್ ಚಾನಲಿಂಗ್‌ನ ಪ್ರಭಾವವಿದೆ. ಅವನಿಗೆ ಇದು ಸಾಧ್ಯವಾಗಿದ್ದು ಲೈಟ್ ಚಾನಲಿಂಗ್‌ನ ಕಾರಣದಿಂದ ಎಂದು ನಾವು ಹೆಮ್ಮೆಯಿಂದ ಹೇಳುತ್ತೇವೆ.

–ಆರ್ ಎಮ್ ನಾಯಿಡು, ಕಾರ್ಯದರ್ಶಿ, ನ್ಯೂಸ್ಕೂಲ್ ಹೊಸಕೆರೆಹಳ್ಳಿ, ಬೆಂಗಳೂರು

ಲೈಟ್ ಚಾನಲಿಂಗ್ ಸೆಷನ್ ಬಹಳ ಸಮಾಧಾನಕರವಾಗಿತ್ತು. ನನಗೆ ಸಂತೋಷವಾಯಿತು. ವಂದನೆಗಳು.

–ಜಗ್‌ಜಿತ್ ಸಿಂಗ್ ಬೇಡಿ, ಗುರು ನಾನಕ್ ವಿದ್ಯಾಲಯ ಸೊಸೈಟಿ, ಜಿ ಟಿ ಬಿ ನಗರ, ಮುಂಬೈ

ಪ್ರತಿ ದಿನ ನಾನು ಲೈಟ್ ಚಾನಲ್ ಮಾಡುತ್ತೇನೆ. ಇದು ನನಗೆ ಸಹಾಯ ಮಾಡುತ್ತಿದೆ. ನನ್ನನ್ನು ಯಾರಾದರೂ ಬೈದರೆ ಭಯಭೀತಳಾಗುತ್ತಿದ್ದೆ. ಆದರೆ ಈಗ ನಾನು ಭಯ ಪಡುವುದಿಲ್ಲ ಮತ್ತು ವಿದ್ಯಾಭ್ಯಾಸವನ್ನೂ ಇಷ್ಟಪಡುತ್ತೇನೆ. ನಾನು ತುಂಬಾ ಸಂತೋಷದಿಂದಿದ್ದೇನೆ.

–ಸುಶೀಲಾ, ವಿದ್ಯಾರ್ಥಿನಿ, ಆರ್ ಬಿ ಬಿ ಪಿ ಎ ಎಮ್ ಹೈಸ್ಕೂಲ್, ಬೆಂಗಳೂರು

ಪ್ರತಿ ದಿನ ರಾತ್ರಿ ನಮ್ಮ ಮನೆಯಲ್ಲಿ TV ಆಫ್ ಮಾಡಿ ಎಲ್ಲರೂ ನಿದ್ದೆ ಮಾಡುವಾಗ, ನಾನು ಲೈಟ್ ಚಾನಲ್ ಮಾಡುತ್ತೇನೆ. ಈಗ ನಾನು ಯಾವಾಗಲೂ ನಗುನಗುತ್ತಾ ಇರುತ್ತೇನೆ. ವಿದ್ಯಾಭ್ಯಾಸದಲ್ಲೂ ನಾನು ಸುಧಾರಿಸಿದ್ದೇನೆ.

–ಜ್ಯೋತಿ ಪ್ರಕಾಶ್, 10ನೇ ತರಗತಿ, ಶಾಲಿನಿ ಸ್ಕೂಲ್, ಬೆಂಗಳೂರು

**ವಿಶ್ವ ಚಾನಲ್ಸ್ ದಿನವಾದ ಫೆಬ್ರುವರಿ 1, 2019ರಂದು ದಶಲಕ್ಷಕ್ಕೂ ಹೆಚ್ಚು ಜನರು ಬೆಳಕನ್ನು ಚಾನಲ್ ಮಾಡಿದರು. ನಿಮಗೆಲ್ಲರಿಗೂ ವಂದನೆಗಳು.**

ಲೈಟ್ ಚಾನಲ್ಸ್ ಕನ್ನಡ ದ್ವೈಮಾಸಿಕ ಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ. ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು-560077
ಮುದ್ರಣ ಸ್ಥಳ: ಲೋಟಸ್ ಪ್ರಿಂಟರ್ಸ್ ಪ್ರೈ. ಲಿ., ಫೋನ್: 23380167 / 23209909, ಇಮೇಲ್: lotus.creation777@gmail.com, ವೆಬ್‌ಸೈಟ್: www.lotusprinters.com
ಮಾಲೀಕರು: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ (ಹೆಣ್ಣೂರು–ಬಾಗಲೂರು ರಸ್ತೆ), ಬೆಂಗಳೂರು - 560077. ಸಂಪಾದಕರು: ಶ್ರೀದೇವಿ